


**ಉತ್ತರಗಳು :**

ರೈತ ಹೊಲ
ಮರ ಬೆಳೆ
ಗದ್ದೆ ಎತ್ತು

ತೋಟ ಬೆವರು
ಕೃಷಿಕ ಅನ್ನದಾತ
ನೇಗಿಲು ದೊಡ್ಡ ಮನಸು
ಹಿಗ್ಗುಕುಗ್ಗು ದವಸಧಾನ್ಯ

## ಅಭ್ಯಾಸ

**I. ಪದಗಳ ಅರ್ಥ ತಿಳಿಯಿರಿ.**

ಅನ್ನ - ಆಹಾರ
ತ್ಯಾಗಿ - ತ್ಯಾಗ ಮಾಡುವವನು, ವಿರಾಗಿ
ದಾತ - ದಾನಿ, ಒಡೆಯ, ಕೊಡುವವ
ನಾಡ – ನಾಡಿನ, ಪ್ರಾಂತದ
ಹೊಲ - ಜಮೀನು, ಕೃಷಿ ಭೂಮಿ
ಅನ್ನದಾತ – ರೈತ
ದವಸಧಾನ್ಯ - ಆಹಾರ ಪದಾರ್ಥಗಳು
ದುಡಿ - ಕೆಲಸ ಮಾಡು, ಶ್ರಮಪಡು
ಸಹಿಸು - ತಾಳಿಕೊಳ್ಳು, ಸೈರಿಸು
ಬೇಗೆ - ಉರಿ, ಉಷ್ಣತೆ

## ಟಿಪ್ಪಣಿ

**ಯೋಗಿ** - ನಿಯಮಬದ್ಧವಾಗಿ ಕಾರ್ಯನಿರ್ವಹಿಸುತ್ತ ಜೀವನ ನಡೆಸುವವ, ಯೋಗದಲ್ಲಿ ನಿರತನಾದವ.

**ಹಿಗ್ಗುಕುಗ್ಗು** - ಏರುಪೇರು, ಉತ್ಸಾಹ ನಿರಾಸೆ, ಕೆಲವೊಮ್ಮೆ ಆನಂದ, ಮಗದೊಮ್ಮೆ ದುಃಖ

**ಗುಡುಗು** - ಮಳೆಗಾಲದಲ್ಲಿ ಮೋಡಗಳ ಘರ್ಷಣೆಯಿಂದ ಉಂಟಾಗುವ ಶಬ್ದ.

---

**1. ಅನ್ನದಾತ ಎಂದು ಯಾರನ್ನು ಕರೆಯಲಾಗುತ್ತದೆ?**
**ಉತ್ತರ :**
ಅನ್ನದಾತ ಎಂದು ರೈತನನ್ನು ಕರೆಯಲಾಗುತ್ತದೆ.

**2. ರೈತನನ್ನು ಅನ್ನದಾತ ಎಂದು ಏಕೆ ಕರೆಯಲಾಗುತ್ತದೆ?**
**ಉತ್ತರ :**
ರೈತನು ಭೂಮಿಯನ್ನು ಹಸನು ಮಾಡಿ ಬೆಳೆಯನ್ನು ಬೆಳೆದು, ನೀರು ಉಣಿಸಿ ಹಾರೈಕೆ ಮಾಡಿ, ಆಹಾರವನ್ನು ನಾಡಿಗೆ ಹಂಚುತ್ತಾನೆ ಆದ ಕಾರಣ ರೈತನನ್ನು ಅನ್ನದಾತ ಎನ್ನಲಾಗುತ್ತದೆ.

**3. ಅನ್ನದಾತ ಎಲ್ಲಿ ದುಡಿಯುವನು?**
**ಉತ್ತರ :**
ಅನ್ನದಾತ ಹೊಲದಲ್ಲಿ ದುಡಿಯುವನು.

**4. ಅನ್ನದಾತನು ದವಸಧಾನ್ಯಗಳನ್ನು ಯಾರಿಗಾಗಿ ಬೆಳೆಯುವನು?**
**ಉತ್ತರ :**
ಅನ್ನದಾತನು ದವಸಧಾನ್ಯಗಳನ್ನು ನಾಡ ಜನರಿಗಾಗಿ ಬೆಳೆಯುವವನು.

**5. ಅನ್ನದಾತನು ಯಾವ ಕಷ್ಟಗಳನ್ನು ಸಹಿಸುತ್ತಾನೆ?**
**ಉತ್ತರ :**
ಅನ್ನದಾತನು ಮಳೆ, ಗುಡುಗು, ಚಳಿ, ನಡುಗು, ಬಿಸಿಲಿನ

ಬೇಗೆಯನ್ನು ಬೆವರು ಸುರಿಸುತ ಕಷ್ಟಗಳನ್ನು ಸಹಿಸುತ್ತಾನೆ.

**6. ರೈತರು ದೇವರಿಂದ ಪಡೆದ ವರ ಯಾವುದು?**
**ಉತ್ತರ :**
ರೈತರು ದೇವರಿಂದ ಗಟ್ಟಿ ದೇಹ ಮತ್ತು ದೊಡ್ಡ ಮನಸ್ಸನ್ನು ವರವಾಗಿ ಪಡೆದಿದ್ದಾನೆ.

**7. ಅನ್ನದಾತನ ಗೆಳೆಯರು ಯಾರು?**
**ಉತ್ತರ :**
ಎರಡು ಎತ್ತುಗಳು ಅನ್ನದಾತನ ಗೆಳೆಯರು.

**8. ಚೆನ್ನಬಸಪ್ಪ ಹೊಸಮನಿಯವರ ಕಾವ್ಯನಾಮವೇನು? ಉತ್ತರ :**
ಚೆನ್ನಬಸಪ್ಪ ಹೊಸಮನಿಯವರ ಕಾವ್ಯನಾಮ ಸತ್ಯಾರ್ಥಿ

**ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು-ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಅನ್ನದಾತನು ನಾಡಿಗೆ ಹೇಗೆ ಸಹಕಾರಿಯಾಗಿದ್ದಾನೆ?**
**ಉತ್ತರ :**
ಅನ್ನದಾತನು ಭೂಮಿಯನ್ನು ಹಸನು ಮಾಡಿ,

**ಉತ್ತರ :**
ಅನ್ನದಾತನು ಭೂಮಿಯನ್ನು ಹಸನು ಮಾಡಿ, ಬೀಜವನ್ನು ಬಿತ್ತಿ, ಗೊಬ್ಬರ ಹಾಕಿ, ನೀರು ಉಣಿಸಿ ಹಾರೈಕೆ ಮಾಡಿ ಆಹಾರವನ್ನು ನಾಡಿಗೆ ಹಂಚುತ್ತಾನೆ. ರೈತ ಕಷ್ಟಪಟ್ಟು ದುಡಿದು ನಾಡಿನ ಜನರ ಹಸಿವನ್ನು ನೀಗುತ್ತಾನೆ. ಈ ರೀತಿ ಅನ್ನದಾತನು ನಾಡಿಗೆ ಸಹಕಾರಿಯಾಗಿದ್ದಾನೆ.

**2. ರೈತನು ಎಂತಹ ಕಷ್ಟಗಳನ್ನು ಸಹಿಸಿಕೊಂಡು ದುಡಿಯುತ್ತಾನೆ?**

**ಉತ್ತರ :**
ರೈತನು ಮಳೆಯೇ ಬರಲಿ, ಗುಡುಗೇ ಬರಲಿ, ಚಳಿಯಾಗಿರಲಿ, ಬಿಸಿಲೇ ಇರಲಿ, ಬೆವರನ್ನು ಸುರಿಸಿ ಕಷ್ಟಗಳನ್ನು ಸಹಿಸಿಕೊಂಡು ದುಡಿಯುತ್ತಾನೆ.

**3. ರೈತನನ್ನು ಯೋಗಿ ತ್ಯಾಗಿ ಎಂದು ಏಕೆ ಕರೆಯಲಾಗುತ್ತದೆ?**

**ಉತ್ತರ :**
ರೈತನು ದೇವರಿಂದ ಗಟ್ಟಿ ದೇಹ. ದೊಡ್ಡ ಮನಸ್ಸು ವರವನ್ನು ಪಡೆದಿರುವ ಕಾರಣ ರೈತನನ್ನು ಯೋಗಿ ತ್ಯಾಗಿ ಎಂದು ಕರೆಯಲಾಗುತ್ತದೆ.

**4. ಎತ್ತುಗಳ ಜೊತೆ ರೈತ ಯಾವ ರೀತಿಯ ಸಂಬಂಧ ಹೊಂದಿದ್ದಾರೆ?**

**ಉತ್ತರ :**
ಎತ್ತುಗಳು ರೈತನ ಜೊತೆಗೂಡಿ ಹೊಲದಲ್ಲಿ ದುಡಿಯುತ್ತವೆ. ಕಷ್ಟಕಾಲದಲ್ಲಿ ಒಬ್ಬರಿಗೊಬ್ಬರು ..........ಬದುಕುತ್ತಾರೆ. ಈ ರೀತಿ ರೈತ ಎತ್ತುಗಳ ಜೊತೆ ಸಂಬಂಧ ಹೊಂದಿದ್ದಾನೆ.

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಫಿಲಿ.**

**1. ಕವಿ ರೈತನ ದುಡಿಮೆಯನ್ನು ಯಾವ ರೀತಿ ವರ್ಣಿಸಿದ್ದಾರೆ?**

**ಉತ್ತರ :**
ಕವಿ ರೈತನ ದುಡಿಮೆಯನ್ನು ಈ ರೀತಿ ವರ್ಣಿಸಿದ್ದಾರೆ. ನಾಡಿನ ಜನರು ಮಾಡುವ ಊಟ ರೈತನ ಬೆವರಿನ ಫಲ. ಭೂಮಿಯನ್ನು ಹಸನು ಮಾಡಿ, ಬೀಜವನ್ನು ಬಿತ್ತಿ, ಗೊಬ್ಬರ ಹಾಕಿ, ನೀರು ಉಣಿಸಿ ಹಾರೈಕೆ ಮಾಡಿ, ಆಹಾರವನ್ನು ನಾಡಿಗೆ ಹಂಚುತ್ತಾನೆ. ಹೀಗಾಗಿಯೇ ರೈತನನ್ನು ನಮ್ಮ ದೇಶದ ಬೆನ್ನೆಲುಬು ಎಂದು ಕರೆಯುತ್ತಾರೆ. ಹೊಲದಲ್ಲಿ ದುಡಿದು ದವಸ ಧಾನ್ಯವನ್ನು ಬೆಳೆದು ನಾಡಿನ ಜನರಿಗೆ ಎಂದು ಬೆವರು ಸುರಿಸಿ ಬೆಳೆಯುತ್ತಾನೆ ಎಂದು ಕವಿಯು ವರ್ಣಿಸಿದ್ದಾರೆ.

**2. ರೈತನ ಜೀವನವನ್ನು ಕುರಿತು ನಿಮ್ಮ ಅಭಿಪ್ರಾಯವನ್ನು ಬರೆಯರಿ.**

**ಉತ್ತರ :**
ರೈತನು ಹೊಲದಲ್ಲಿ ದುಡಿದು ನಾಡ ಜನರು ಬದುಕಲು ದವಸ-ಧಾನ್ಯ ಬೆಳೆಯುವನು. ಎಂತಹದ್ದೇ ಸಂದರ್ಭದಲ್ಲಿ ಮಳೆ, ಗುಡುಗು, ಚಳಿ, ಬಿಸಿಲಿನ ಬೇಗೆಯಾಗಲಿ ಬೆವರು ಸುರಿಸಿ ಕಷ್ಟಗಳನ್ನು ಸಹಿಸಿಕೊಂಡು ಒಂದೇ ಸಮನೆ ದುಡಿಯುತ್ತಾನೆ. ದೇವರಿಂದ ಗಟ್ಟಿ ದೇಹ, ದೊಡ್ಡ ಮನಸ್ಸು ಇಂತಹ ವರವನ್ನು ಪಡೆದು ಯೋಗಿಯಾಗಿ ತ್ಯಾಗಿಯಾಗಿ ಅನ್ನ ನೀಡುತಿರುವನು. ಎರಡು ಎತ್ತುಗಳ ಜೊತೆಗೂಡಿ ಹೊಲದಲ್ಲಿ ದುಡಿಯುತ್ತಾನೆ. ಇನ್ನೊಬ್ಬರ ಸಂತೋಷದಲ್ಲಿ ತನ್ನ ಸಂತೋಷ ಕಾಣುತ್ತಾನೆ. ಆದುದರಿಂದ ರೈತನ ಜೀವನ ಯೋಗ್ಯವಾದ ಜೀವನ ಎಂಬುದು ನನ್ನ ಅಭಿಪ್ರಾಯವಾಗಿದೆ.

**III. ಭಾಷಾಭ್ಯಾಸ**

**ಅ) ಗುಂಪಿಗೆ ಸೇರಲಿರುವ ಪದವನ್ನು ಆಲಿಸಿ ಬರೆಯಿರಿ.**

1. ಚಳಿಗಾಲ, ಮಳೆಗಾಲ, ನಡುಗಾಲ, ಬೇಸಿಗೆಕಾಲ = **ನಡುಗಾಲ**
2. ಎತ್ತು, ಎಮ್ಮೆ, ಹೋರಿ, ನಂದಿ = **ಎಮ್ಮೆ**
3. ಬೆಟ್ಟ, ಹೊಲ, ತೋಟ, ಗದ್ದೆ = **ಬೆಟ್ಟ**
4. ಗೆಳೆಯ, ಸ್ನೇಹಿತ, ಮಿತ್ರ, ಶತ್ರು = **ಶತ್ರು**
5. ರೈತ, ಅನ್ನದಾತ, ಕೃಷಿಕ, ವ್ಯಾಪಾರಿ = **ವ್ಯಾಪಾರಿ**

**ಆ) 'ಅ' ಪಟ್ಟಿಗೆ ಫಲ ಹೊಂದುವ ಪದವನ್ನು 'ಬ' ಆ ಪಟ್ಟಿಯಿಂದ ಆಲಸಿ ಬರೆಯಿರಿ.**

| 'ಅ' ಪಟ್ಟಿ | 'ಬ' ಪಟ್ಟಿ | |
|---|---|---|
| 1. ಅನ್ನದಾತ | ಅ) ಧಾನ್ಯ | **ರೈತ** |
| 2. ಮಳೆ | ಆ) ಕುಗ್ಗು | **ಗುಡುಗು** |
| 3. ಚಳಿ | ಇ) ರೈತ | **ನಡುಗು** |
| 4. ಹಿಗ್ಗು | ಈ) ಗುಡುಗು | **ಕುಗ್ಗು** |
| 5. ದವಸ | ಉ) ನಡುಗು | **ಧಾನ್ಯ** |

**ಇ) ಕೃಷಿ ಥಂಬಂಧಿತ ಆರು ಪದಗಳನ್ನು ಬರೆಯಿರಿ.**
**ಮಾದರಿ : ಎತ್ತು**

1. ನೇಗಿಲು
2. ಇಳುವರಿ
3. ಉಳುಮೆ

4. ಬೆಳೆ
5. ರೈತ
6. ಕಟಾವು

**ಈ) 'ಅನ್ನದಾತ' ಪದ್ಯದಲ್ಲಿ ಬಳಕೆಯಾಗಿರುವ ಪ್ರಾಥ ಪದಗಳನ್ನು ಆಯ್ದು ಬರೆಯಿರಿ.**

ಮಾದರಿ : ದುಡಿವನು - ಬೆಳೆವನು

1. ಸಹಿಸುತ ದುಡಿಯುತ
2. ಪಡೆದನು ತಿರುವನು
3. ಗೆಳೆಯರು ನಡೆವರು

**ಉ) ಇಲ್ಲಿರುವ ಪದಗಳನ್ನು ನಿಮ್ಮ ಸಂ್ವತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.**

**1. ದೊಡ್ಡಮನಸು :** ವಿಶ್ವೇಶ್ವರಯ್ಯನವರು ಅವರ ತಾಯಿ ದೊಡ್ಡ ಮನಸ್ಸು ಮಾಡಿ ಓದಿಸಿದರು.

a

**2. ಹಿಗ್ಗು :** ಮಕ್ಕಳ ಆಟ ಪಾಠಗಳನ್ನು ಕಂದು ಮನೆಯಲ್ಲಿ ಹಿಗ್ಗು ತುಂಬಿತ್ತು.

**3. ತ್ಯಾಗಿ :** ಕರ್ಣನು ದಾನ ಮಾಡುವುದರಲ್ಲಿ ತ್ಯಾಗಿ ಎನಿಸಿಕೊಂಡಿದ್ದನು.

**4. ಬೆವರು ಸುರಿಸಿ :** ರೈತನು ಬೆವರು ಸುರಿಸಿ ಬೆಳೆ ಬೆಳೆಯುತ್ತಾನೆ.

**5. ಅನ್ನದಾತ :** ಅನ್ನದಾತನ ಬದುಕು ಇಂದು ಶೋಚನೀಯವಾಗಿದೆ.

KSEEBSolutions.com